6. ವರ್ಗ ಬದಲಾವಣೆ ಕೋರಿರುವ ಅಹವಾಲುಗಳು

7. ಹೊಸದಾಗಿ ಪಡಿತರ ಚೀಟಿ ಕೋರಿರುವ ಅಹವಾಲುಗಳು

ಉ) ಹೌದು.

ಊ) ಲೋಪದೋಷಗಳ ಬಗ್ಗೆ ಸಾರ್ವಜನಿಕರಿಂದ ಸ್ವೀಕರಿಸಿರುವ ಅಹವಾಲುಗಳನ್ನು ಪೂರ್ಣ ಪ್ರಮಾಣದಲ್ಲಿ ವಿಲೇವಾರಿಗೊಳಿಸಿ ಖಾಯಂ ಪಡಿತರ ಚೀಟಿ ವಿತರಣೆಗೆ ಕ್ರಮ ವಹಿಸಲಾಗುವುದು. ಇದಕ್ಕೆ 6 ತಿಂಗಳ ಕಾಲಾವಕಾಶದಲ್ಲಿ ಕ್ರಮ ವಹಿಸಲಾಗುವುದು. ಶಾಶ್ವತ ಪಡಿತರ ಚೀಟಿಗಳನ್ನು ನೀಡಲು ರೂ. 45–00 ಶುಲ್ಕವನ್ನು ನಿಗಧಿ ಪಡಿಸಲಾಗಿದೆ.

147 (232) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಮೈಸೂರಿನ ಹಾಪ್‌ಕಾಮ್ಸ್‌ನ್ನು ಬೆಂಗಳೂರಿನ ಹಾಪ್‌ಕಾಮ್ಸ್‌ಗೆ ವಿಲೀನ ಗೊಳಿಸಬೇಕೆಂಬ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಮೈಸೂರಿನ ಭಾಗದ ರೈತರಿಗೆ ಅನುಕೂಲವಾಗುವುದೆಂಬುದು ಸರ್ಕಾರಕ್ಕೆ ತಿಳಿದಿದೆಯೇ ;

ಇ) ಹಾಗಿದ್ದಲ್ಲಿ, ಈ ಪ್ರಸ್ತಾವನೆಗೆ ತೆಗೆದುಕೊಂಡ ಕ್ರಮವೇನು ; (ವಿವರ ನೀಡುವುದು)?

ಶ್ರೀ ಜಿ.ಟಿ. ದೇವೇಗೌಡ (ಸಹಕಾರ ಸಚಿವರು):

ಅ) ಹೌದು

ಆ) ಇಲ್ಲ.

ಇ) ಮೈಸೂರು ಹಾಪ್‌ಕಾಮ್ಸ್‌ನ್ನು ಬೆಂಗಳೂರು ಹಾಪ್‌ಕಾಮ್ಸ್‌ಗೆ ವಿಲೀನಗೊಳಿಸಲು ನೌಕರರು ಮತ್ತು ರೈತರಿಂದ ಮನವಿ ಬಂದಿತ್ತು ಈ ಬಗ್ಗೆ ಸರ್ಕಾರ ಪರಿಶೀಲಿಸಿ, ಪ್ರತಿಯೊಂದು ಜಿಲ್ಲಾ ಹಾಪ್‌ಕಾಮ್‌ಗಳು ಸ್ವಂತ ಸಂಪನ್ಮೂಲ ರೂಢಿಸಿಕೊಂಡು ಆ ವ್ಯಾಪ್ತಿಯ ರೈತರು ಮತ್ತು ಗ್ರಾಹಕರುಗಳಿಗೆ ಸಹಾಯವಾಗಬೇಕೆಂಬ ಉದ್ದೇಶದಿಂದ ವಿಲೀನಗೊಳಿಸುವ ಮನವಿಯನ್ನು ಪರಿಗಣಿಸಿರುವುದಿಲ್ಲ.

148 (233) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಮೈಸೂರಿನ ಆರ್.ಎಂ.ಸಿ.ಯಲ್ಲಿನ ಮಳಿಗೆಗಳು, ದಾಸ್ತಾನು ಮಳಿಗೆಗಳು ಹಾಗೂ ಇತರೆ ಕಟ್ಟಡಗಳೆಷ್ಟು (ವಿವರ ನೀಡುವುದು) ;